


# ಆರುವ ತನಕ ಕಾಯಬೇಕು

ದೇವರಹಳ್ಳಿ ಎಂಬ ಊರು. ಅಲ್ಲಿ ಒಬ್ಬಳು ಅಜ್ಜಿವಾಸವಾಗಿದ್ದಳು. ಅವಳಿಗೆ ಅವಳ ಕಡೆಯವರೆಂಬ ಯಾರೂ ಇರಲಿಲ್ಲ.

ಅವಳು ಊರಿನ ದೇವಸ್ಥಾನದ ಪಕ್ಕದಲ್ಲಿ ಸಣ್ಣ ಗುಡಿಸಲು ಹಾಕಿಕೊಂಡು ವಾಸವಾಗಿದ್ದಳು. ನಿತ್ಯ ಬೆಳಗ್ಗೆ ಎದ್ದು ದೇವಸ್ಥಾನದ ಸುತ್ತ ಕಸ ಹೊಡೆದು ಸ್ವಚ್ಛಗೊಳಿಸಿ, ಅಂಗಳ ಸಾರಿಸಿ ರಂಗವಲ್ಲಿ ಹಾಕುತ್ತಿದ್ದಳು. ನಂತರ ಸುತ್ತಮುತ್ತ ಸಿಗುವ ಹೂವು ಕೊಯ್ದು ದೇವರ ಗುಡಿಯಲ್ಲಿಟ್ಟು, ನಿತ್ಯ ಪೂಜೆಗೆ ಅನುಕೂಲ ಮಾಡುತ್ತಿದ್ದಳು. ಪೂಜೆ ಆದನಂತರ ಪೂಜಾರಿ ಕೊಡುವ ಪ್ರಸಾದ ಮತ್ತು ಭಕ್ತರು ನೀಡುವ ದವಸ ಧಾನ್ಯ ಸ್ವೀಕರಿಸಿ ಹೇಗೋ ಜೀವನ ಸಾಗಿಸುತ್ತಿದ್ದಳು.

ಊರಲ್ಲಿ ಏನೇ ಸಮಾರಂಭವಾದರೂ ಅಜ್ಜಿಯನ್ನು ಪ್ರೀತಿಯಿಂದ, ಕರೆದು ಎಲ್ಲರೂ ಊಟ ತಿಂಡಿ, ನೀಡಿ ಏನಾದರೂ ಉಡುಗೊರೆ ಕೊಟ್ಟು ಗೌರವಿಸುತ್ತಿದ್ದರು. ಒಮ್ಮೆ ಊರ ಗೌಡರ ಮನೆಯಲ್ಲಿ ಹಬ್ಬದಂದು ಗೋಧಿ ಹುಗ್ಗಿ ಮಾಡಿದ್ದರು. ಅದನ್ನು ಅಜ್ಜಿಗೂ ಕಳಿಸಿದ್ದರು. ಅಜ್ಜಿಗೆ ಅದರ ಸವಿರುಚಿ ಬಹಳ ಹಿಡಿಸಿತು. ತಾನು ಒಮ್ಮೆಯಾದರೂ ಮಾಡಿಕೊಂಡು ತಿನ್ನಬೇಕೆಂಬ ಆಸೆ ಮನದಲ್ಲಿ ಹುಟ್ಟಿತು.

ಅದನ್ನು ಮಾಡುವ ವಿಧಾನ ಮತ್ತು ಅದಕ್ಕೇನೇನು ಹಾಕಬೇಕು ಎನ್ನುವುದನ್ನು ಬಲ್ಲವರಿಂದ ಕೇಳಿ ತಿಳಿದುಕೊಂಡಳು. ಊರಿನ ಹತ್ತಿರದ ಸಂತೆ ದಿನ ಹೋಗಿ ಬೆಲ್ಲ, ಕೊಬ್ಬರಿ, ಗೋಧಿನುಚ್ಚು, ತುಪ್ಪ ದ್ರಾಕ್ಷಿ ಗೋಡಂಬಿ ತೆಗೆದುಕೊಂಡು ಬಂದಳು.

ಮಾರನೇ ದಿನ ನಿತ್ಯದ ಕೆಲಸ ಆದ ಮೇಲೆ ಅಜ್ಜಿ ಹುಗ್ಗಿ ಮಾಡಲು ಪ್ರಾರಂಭಿಸಿದಳು. ಹುಗ್ಗಿ ನಿಧಾನವಾಗಿ ಬೇಯ ತೊಡಗುತ್ತಿದ್ದಂತೆ ಘಮ ಘಮ ಸುವಾಸನೆ ಪಸರಿಸಿತು. ಹುಗ್ಗಿ ಒಲೆ ಮೇಲಿಂದ ಕೆಳಗಿಳಿಸುತ್ತಿದ್ದಂತೆ ಒಂದು ಸೌಟು ಬಟ್ಟಲಿಗೆ ಹಾಕಿ ದೇವರಿಗೆ ನೈವೇದ್ಯ ಮಾಡಿ ಕೈಮುಗಿದಳು.

ಅಜ್ಜಿಗೆ, ಅದರ ವಾಸನೆ ತಡೆಯಲು ಸಾಧ್ಯ ಆಗಲೇಯಿಲ್ಲ. ಆಸೆ ತಡೆಯಲಾರದೆ ಬಟ್ಟಲಲ್ಲಿದ್ದ ಬಿಸಿ ಬಿಸಿ ಹುಗ್ಗಿಯನ್ನು ಬಾಯಿಗೆ ಹಾಕಿಕೊಂಡಳು. ಬಿಸಿ ಹುಗ್ಗಿ, ಬಾಯಿಗೆ ಬೀಳುತ್ತಿದ್ದಂತೆ ನಾಲಗೆ ಸುಟ್ಟಿತು. ನಾಲಗೆ ಉರಿಯ ತೊಡಗಿತು. ಅಜ್ಜಿ ಉರಿ ತಾಳಲಾರದೆ ಬಾಯಿ ಬಡಿದುಕೊಳ್ಳತೊಡಗಿದಳು. ಆಕೆಯ ಬೊಬ್ಬೆ ಕೇಳಿ, ದೇವಸ್ಥಾನಕ್ಕೆ ಬಂದ ಕೆಲವರು ಗಾಬರಿಯಿಂದ ಓಡೋಡಿ ಬಂದು ವಿಷಯವೇನೆಂದು ಕೇಳಿದರು.

ಆಗ ಅಜ್ಜಿ ಹುಗ್ಗಿಕಥೆ ಹೇಳಿದಳು. ಅಜ್ಜಿಯ ಹುಗ್ಗಿಯ ಕಥೆ ಕೇಳಿ ಜನ ನಕ್ಕರು. ‘ಅಜ್ಜಿ... ಹುಗ್ಗಿ ಮಾಡುವ ತನಕ ಕಾದೆ. ಅದರ ಬಿಸಿ ಆರುವ ತನಕ ಕಾಯಲಿಲ್ಲ. ಹುಗ್ಗಿ ತಿನ್ನುವ ನಿನ್ನ ಅದಮ್ಯ ಆಸೆ ಕೈ–ಬಾಯಿ ಸುಡುವಂತೆ ಮಾಡಿತು. ಸುಟ್ಟ ನಾಲಗೆ ಮೊದಲಿನಂತೆ ಸರಿಯಾಗಲು ಎರಡು ವಾರವಾದರೂ ನೀ ಕಾಯಬೇಕಾಗುತ್ತದೆ. ಅಲ್ಲಿವರೆಗೆ ಹೇಗಾದರೂ ಸುಧಾರಿಸಿಕೊ’ ಎಂದು ಸಮಾಧಾನ ಮಾಡಿದರು.

ಬಂದವರೇ ಉಳಿದ ಬಿಸಿ ಬಿಸಿ ಹುಗ್ಗಿಯನ್ನು ತಟ್ಟೆಯಲ್ಲಿ ಹರಡಿ ತಣಿಸಿ ಅಜ್ಜಿಗೆ ಕೊಟ್ಟರು. ಅಜ್ಜಿಯೊಂದಿಗೆ ಅವರೂ ರುಚಿ ನೋಡಿದರು. ಅಜ್ಜಿ... ಹುಗ್ಗಿ ರುಚಿಕಟ್ಟಾಗಿದೆ. ಆದರೆ ನೀ ಬಾಯಿ ಸುಟ್ಟುಕೊಂಡು ರುಚಿ ಕೆಡಿಸಿಕೊಂಡೆ ಎಂದರು.

ಇದೇ ಕಾರಣಕ್ಕೆ ‘ಅಡಿಗೆ ಆಗುವ ತನಕ ಕಾದು, ಅದು ಆರುವ ತನಕವೂ ಕಾಯಬೇಕು’ ಎಂದು ನಮ್ಮ ಹಿರಿಯರು ಹೇಳಿದ್ದಾರೆ. ಅಜ್ಜಿ, ಬೇಸರ ಬೇಡ. ನಾವಿದ್ದೇವೆ. ನಿನ್ನ ಬಾಯಿ ಸರಿಯಾದ, ಮೇಲೆ ಮತ್ತೆ ಎಲ್ಲ ಸಾಮಗ್ರಿ ಕೊಡುತ್ತೇವೆ. ಆಗ ಹೀಗೆ ರುಚಿಯಾಗಿ ಹುಗ್ಗಿ ಮಾಡಿಕೊಂಡು ಆರಿದ ಮೇಲೆ ತಿನ್ನುವೆಯಂತೆ ಎಂದು ಸಮಾಧಾನ ಮಾಡಿದರು. ಉಳಿದ ಹುಗ್ಗಿಯನ್ನು ಬಂದವರೇ ಆರಿಸಿತಿಂದರು. ಅಜ್ಜಿ ಆಸೆ ಕಂಗಳಿಂದ ನೋಡುತಿದ್ದಳು.

ಈಗಲೂ ಊರಲ್ಲಿ ‘ಹುಗ್ಗಿ’ ಎಂದಕೂಡಲೇ ಅವಸರದಲ್ಲಿ ಹುಗ್ಗಿತಿಂದ ‘ಅಜ್ಜಿಯ ಹುಗ್ಗಿ ಕಥೆ’ಯನ್ನು ಮರೆಯದೇ ಹೇಳುತ್ತಾರೆ.

■ ರಾಮಕೃಷ್ಣ ಗೋಖಲೆ